ordered ಎಂದು ಹೇಳಿದರೆ Is it sufficient? ಇದು ಆಗಬಾರದು. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು. ಮತ್ತೊಂದು ಮಾತು ಇದೇ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. 17-03-93ರಂದು, ಚಾಮರಾಜನಗರ ತಾಲ್ಲೂಕಿನ, ಸಂತೇಮಾರಹಳ್ಳಿ ಕ್ಷೇತ್ರದ, ನಾಗವಳ್ಳಿ ಗ್ರಾಮದಲ್ಲಿ ಉಪ್ಪಾರ ಕೋಮಿನವರ ಮರ್ಡರ್ ಆಗಿದೆ. ಒಬ್ಬ ಬಡ ಉಪ್ಪಾರನ ಮರ್ಡರ್ ಆಗಿದೆ. ಇವತ್ತಿನವರೆಗೆ ಯಾರೂ ಅರೆಸ್ಟ್ ಆಗಿಲ್ಲ. ಇದರ ಬಗ್ಗೆ ಯಾವುದೇ ಕ್ರಮ ಇಲ್ಲ. ಬಡ ಉಪ್ಪಾರ ಸತ್ತಿದ್ದಾನೆ, ಅವನ ಮನೆಯವರಿಗೆ ಪರಿಹಾರವನ್ನೂ ಕೊಟ್ಟಿಲ್ಲ. ಈ ಸಂತೇಮಾರನಹಳ್ಳಿ ಕ್ಷೇತ್ರದಲ್ಲಿ ಪರಿಶಿಷ್ಟಜನಾಂಗ ಮತ್ತು ಉಪ್ಪಾರಜನಾಂಗದವರು ಇದ್ದಾರೆ. ಈ ಪ್ರಕಾರ ಆಗುತ್ತಾ ಹೋದರೆ, ನೀವು ಯಾವ ಪ್ರಕಾರ ಸರ್ಕಾರ ನಡೆಸುವುದಕ್ಕೆ ಸಾಧ್ಯವಾಗುತ್ತದೆ? ಜನ ನಿಮ್ಮ ಮೇಲೆ ಯಾವ ರೀತಿ, ವಿಶ್ವಾಸ ಇಡಬೇಕು. ಕಾಯಿದೆ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಇದು ಮುಂದೆ ಆಗಬಾರದು. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ, ಎಂಬುದನ್ನು ಹೇಳಬೇಕು. ಇದೇ ಪ್ರಕಾರ, ನಾಗವಳ್ಳಿ ಗ್ರಾಮದ ವಿಚಾರ ಏನು ಪ್ರಸ್ತಾಪ ಮಾಡಿದ್ದೇನೆ, ಅದರ ಬಗ್ಗೆ ಯಾವ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ? ಇದುವರೆಗೂ ಯಾರನ್ನೂ ಅರೆಸ್ಟ್ ಮಾಡಿಲ್ಲ, ಏಕೆ ಅರೆಸ್ಟ್ ಮಾಡಲಿಲ್ಲ. ಇದಕ್ಕೆ ತಾವು ಸೃಷ್ಟೀಕರಣ ನೀಡಬೇಕು ಮತ್ತು ಅವರಿಗೆ ಪರಿಹಾರ ಕೊಡತಕ್ಕ ವ್ಯವಸ್ಥೆ ತಮ್ಮ ಸರ್ಕಾರದಿಂದ ಆಗಬೇಕೆಂದು ಈ ಸದನದಲ್ಲಿ ಹೇಳುತ್ತಾ, ಯಾರು ಸತ್ತಿದ್ದಾರೆ; ಆ ಉಪ್ಪಾರ ವ್ಯಕ್ತಿಯ ಹೆಸರು ಮಹಾದೇವ ಶೆಟ್ಟಿ ಎಂದು, ಇವರ ಮನೆಯವರಿಗೆ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಯಾರೇ ಇರಲಿ, ಯಾವುದೇ ಸಮಾಜ ಇರಲಿ, ಯಾವ ಜಾತಿ ಇರಲಿ, ಇಂತಹ ವಿಚಾರದಲ್ಲಿ ಸರ್ಕಾರ ನಿಷ್ಪಾರವಾದ ಕ್ರಮ ತೆಗೆದುಕೊಳ್ಳಬೇಕು. ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ, ಕೇಂದ್ರ ಕಾರಾಗೃಹ ಏನಿದೆ, ಇದರ ಸುಧಾರಣೆ, ಮೊದಲು ಅತಿ ಮುಖ್ಯವಾಗಿ ಆಗಬೇಕಾಗಿದೆ. ಯಾವುದೋ ಓಬೀರಾಯನ ಕಾಲದ ವ್ಯವಸ್ಥೆ ಅದರೊಳಗಿದೆ. ಸಾಮಾನ್ಯವಾಗಿ; ಪೋಲೀಸ್ ಸ್ಟೇಷನ್‌ನಲ್ಲಿ, ಲಾಕಪ್‌ನಲ್ಲಿ ಸಾವು ಸರ್ವೇಸಾಮಾನ್ಯ. ಆದರೆ, ಜೈಲಿನಲ್ಲಿ ಸಾವು ಎಂದು ಹೇಳುವುದು, ಬಹಳ ಚಿಂತನೆ ಮಾಡಿ, ಯೋಚನೆ ಮಾಡತಕ್ಕ ವಿಚಾರ . . .

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಒಂದೇ ವಿಷಯವನ್ನು ಅನೇಕ ಬಾರಿ ಹೇಳುವುದಕ್ಕೆ ನಿಯಮ 314 ಒಪ್ಪುವುದಿಲ್ಲ. ಆದ್ದರಿಂದ, ಹೇಳಿದಂತಹ ವಿಷಯವನ್ನೇ ಪುನಃ ಹೇಳದೇ ಸಮಯದ ಅಭಾವದಿಂದ, ಬೇರೆ ವಿಷಯ ಇದ್ದರೆ, ಮಾನ್ಯ ಸದಸ್ಯರು ಹೇಳಬಹುದು. ಏಕೆಂದರೆ, ಹೇಳಿದ ವಿಷಯವನ್ನೇ ಮತ್ತೆ ಹೇಳುವುದಕ್ಕೆ ನಿಯಮ ವಿರೋಧವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಾವು ಗೃಹಮಂತ್ರಿಗಳೂ ಆಗಿದ್ದೀರಿ, ಒಂದು ಸಾರಿ ಆ ಜೈಲಿನ ಸಂದರ್ಶನ ಮಾಡಿ. ತಾವು ಮೊನ್ನೆ ಸಮಾರಂಭಕ್ಕೆ ಹೋಗಿದ್ದೀರಿ. ಆಗ ತಮಗೆ ಗೊತ್ತಾಗುವುದಿಲ್ಲ. ಆಗ ಒಂದು ವ್ಯವಸ್ಥೆ ಇರುತ್ತದೆ. ಅಲ್ಲಿ ಕುರ್ಚಿ, ಹಾರ, ತುರಾಯಿ, ವ್ಯವಸ್ಥೆ ಮಾಡಿರುತ್ತಾರೆ. ಮುಖ್ಯಮಂತ್ರಿಗಳು ಜೈಲಿಗೆ ಬರುತ್ತಾರೆಂದು ಎಂದು ಹೇಳಿದರೆ, ಹಾರ, ತುರಾಯಿ ಹಿಡಿದುಕೊಂಡು ನಿಂತಿರುತ್ತಾರೆ. ಆ ತರಹ ಹೋಗತಕ್ಕ ಜೈಲೇ ಬೇರೆ. ನೀವು ತಕ್ಷಣ, ಯಾರಿಗೂ ಗೊತ್ತಿಲ್ಲದೆ, ನಿಮ್ಮ ಕಾರು ಮನೆಗೆ ಹೋಗುವಾಗ, ಸ್ವಲ್ಪ ಆ ಕಡೆ ತಿರುಗಿಸಿ ಎಂದು ಹೇಳಿದರೆ, ತಕ್ಷಣ ಯಾರಿಗೂ ಹೇಳದೆ ಒಳಗಡೆ ಹೋಗಬಹುದು. ನೀವು ಒಂದು ಸಾರಿ ಆ ರೀತಿ ಹೋದರೆ, ನಿಮಗೆ ಅಲ್ಲಿನ ಪರಿಸ್ಥಿತಿ ಗೊತ್ತಾಗುತ್ತದೆ.

ಅಧ್ಯಕ್ಷರು : ಈಗಾಗಲೇ ಅವರು ಹೇಳಿದ್ದಾರೆ, ಕಾಲಾವಕಾಶ ಕಡಿಮೆ ಇದೆ, ಮತ್ತೆ ಅದನ್ನೇ ಹೇಳುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿನ ಪರಿಸ್ಥಿತಿ ತಮಗೆ ಅರ್ಥವಾಗುತ್ತದೆ. ನಾನು ಸುಮಾರು ಎರಡು ಬಾರಿ ಅಲ್ಲಿದ್ದೆ. ಅಲ್ಲಿ ಬ್ಯಾರೆಕ್‌ಗಳಿಂದು ಏನಿದೆ, ಅವು ಅವ್ಯವಸ್ಥೆಯ ಪರಮಾವಧಿ. ರಾಜಕಾರಣಗಳಿಗೇ ಬೇರೆ....

ಪ್ರೊ : ಎಂ. ಡಿ. ನಂಜುಂಡ ಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೇ, ಕಾನೂನು ಮಂತ್ರಿಗಳು ಸದನದಲ್ಲಿ 5 ನಿಮಿಷ ಇರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ಏನೆಂದರೆ, ಶ್ರೀನಿವಾಸ್ ಎನ್ನತಕ್ಕ ಒಬ್ಬ ಹುಡುಗ, ಇನ್ನೂ ವಿಚಾರಣೆ ಮಟ್ಟದಲ್ಲಿಯೇ ಇದೆ. ಅವನ ಸಾವಿಗೆ ಕಾರಣ ಏನು, ಸುಟ್ಟು ಹಾಕುವುದಕ್ಕೆ ಕಾರಣ ಏನು? ಇದು ಬಹಳ ಮುಖ್ಯ. ಈ ರೀತಿ ಸುಡಬೇಕಾದರೆ, ಅದರಲ್ಲಿಯೂ ಗುರುತರವಾಗಿ ಅಲ್ಲಿಂದ ಉದ್ದೇಶಪೂರ್ವಕವಾಗಿ ಅವನು ಸತ್ತಿದ್ದಾನೆ, ಆದ್ದರಿಂದ ಇದನ್ನು ಸುಡತಕ್ಕ ಪರಿಸ್ಥಿತಿಗೆ ಹೋಗಬೇಕಾದರೆ, ಇದು ಬಹಳ ಗಂಭೀರವಾದ ಪರಿಸ್ಥಿತಿ. ಈ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಅಧ್ಯಕ್ಷರೇ, ತಮಗೆ ಹೇಳುತ್ತೇನೆ, ಕೆಲವು ಖೈದಿಗಳಿಗೆ ಅಲ್ಲಿ ರಾಜೋಪಚಾರ ನಡೆಯುತ್ತದೆ. ಕರ್ನಾಟಕದಲ್ಲಿರತಕ್ಕ ಅನೇಕ ಜೈಲುಗಳಲ್ಲಿ, ಕೆಲವು ಬಂದೋಬಸ್ತ್ ಆದ ಖೈದಿಗಳೂ ಇದ್ದಾರೆ. ಅವರು ಪೋಲೀಸಿನವರನ್ನಾಹೆದರಿಸುತ್ತಾರೆ, ಸರ್ಕಾರವನ್ನೂ ಹೆದರಿಸತಕ್ಕ ಕೆಲವು ಭಯೋತ್ಪಾದಕರೂ ಇದ್ದಾರೆ. ಅವರುಗಳಿಗೆ ಒಳಗಡೆ ರಾಜೋಪಚಾರ ನಡೆಯುವಂತಹ ವ್ಯವಸ್ಥೆಯೂ ಇದೆ.

12.15 ಪಿ. ಎಂ.

ಆದ್ದರಿಂದ ಮುಖ್ಯಮಂತ್ರಿಗಳು ಈ ಬಗ್ಗೆ ಸ್ಪಷ್ಟವಾದಂತಹ ಒಂದು ತೀರ್ಮಾನ ಮಾಡಬೇಕು. ಮತ್ತು ಅಲ್ಲಿಗೆ ಸಂದರ್ಶನ ಮಾಡಬೇಕು. ಅಲ್ಲಿ ಶ್ರೀನಿವಾಸ್ ಸತ್ತಿರುವ ಬಗ್ಗೆ ಸಮಗ್ರವಾಗಿ ನ್ಯಾಯಾಂಗ ತನಿಖೆ ಆಗಬೇಕೆನ್ನತಕ್ಕಂಥಾದ್ದು ಒಂದು. ಎರಡನೆಯದಾಗಿ, ನಾನು ತಮಗೆ ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೇನೆ. ಅದನ್ನು ನಾಳೆ ತಾವು ಈ ಸದನದ ಮುಂದೆ ತರುತ್ತೇನೆಂದು ಭರವಸೆ ಕೊಟ್ಟಿದ್ದೀರಿ. ತಮ್ಮ ಭರವಸೆ ಪ್ರಕಾರ ಅದರಲ್ಲಿ ನನ್ನದೇನೂ ತಕರಾರು ಇಲ್ಲ. ಆದರೆ ಚಾಮರಾಜನಗರ ತಾಲ್ಲೂಕಿನಲ್ಲಿ ಸಾಗವಳ್ಳಿ ....

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಪ್ರಸ್ತಾವನೆ ಮಾಡಿದರು.

ಶ್ರೀ ವಾಟಾಳ್ ನಾಗರಾಜ್ : ಅವರು ಪ್ರಸ್ತಾವನೆ ಮಾಡಿಬಿಟ್ಟರು. ನಾನು ಪ್ರಸ್ತಾಪ ಮಾಡದಿದ್ದರೆ ಕರ್ತವ್ಯಲೋಪ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಗಮನ ಸೆಳೆಯುವ ಸೂಚನೆಯನ್ನೂ ಸಹ ಕಳುಹಿಸಿದ್ದೇನೆ. ನಾಗವಳ್ಳಿಯಲ್ಲಿ ಮಹದೇವ ಶೆಟ್ಟಿ ಅಂತ ಏನು ಸತ್ತಿದ್ದಾನೆ ಸರ್ಕಾರ ಏನು ಪರಿಹಾರ ಕೊಡಬೇಕೋ ಅದನ್ನು ಕೊಡಲಿ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ನನ್ನದೂ ಒಂದು ಇದೆ. ಜೈಲಿನ ಕಥೆಯನ್ನೇ ಪೂರ್ಣ ಹೇಳುತ್ತಾ ಕುಳಿತುಕೊಂಡರೆ ಹೇಗೆ? ಅವರು ಬೇರೆ ಯಾವುದಾದರೂ ವಿಚಾರದಲ್ಲಿ ಪ್ರಸ್ತಾಪ ಮಾಡಲಿ. ಜೀರೋ ಅವರ್‌ನಲ್ಲಿ ನನ್ನದೂ ಒಂದು ಇದೆ ಬಹಳ ಪ್ರಾಮುಖ್ಯವಾದುದು.ನಾನು ತಮ್ಮ ಹತ್ತಿರ ಮಾತನಾಡಿದ್ದೇನೆ. ಬರೀ ಜೈಲ್ ಕಥೆಯನ್ನೇ ಹೇಳಿಕೊಳ್ಳುತ್ತಾ ಕುಳಿತುಕೊಂಡು ಬಿಟ್ಟರೆ ನಾನು ಏನು ಮಾಡಲಿ?

ಅಧ್ಯಕ್ಷರು : ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರ ಬಗ್ಗೆ ಸರ್ಕಾರದ ಕ್ರಮ ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕೆಂದು ನಾನು ತಮ್ಮ ಮೂಲಕ ಹೇಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ಜೈಲಿಗೆ ಸಂಬಂಧಪಟ್ಟ ಹಾಗೆ ಒಂದು ವಿಚಾರ. ಕಾನೂನು ಮಂತ್ರಿಗಳು ಜೈಲಿಗೆ ಹೋಗಿರುವವರು ಹಿಂದೆ. ಸಭಾನಾಯಕರು ಇನ್ನೂ ಜೈಲಿಗೆ ಹೋಗಿಲ್ಲ. ಆದ್ದರಿಂದ ಅವರಿಗೆ ಆ ಮಾಹಿತಿ ಇಲ್ಲ. ನಿಮ್ಮ ಜೈಲುಮ್ಯಾನ್ಯುಯಲ್ ಯಾವ ವರ್ಷದ್ದು ಅಂತ ಸ್ವಲ್ಪ ತೆಗೆದು ನೋಡಿ. ಬ್ರಿಟೀಷ್ ಕಾಲದ್ದು 30ನೇ ಇಸವಿಯ ಜೈಲು ಮ್ಯಾನುಯಲ್ ಇಟ್ಟುಕೊಂಡು ನಾವು ಜೈಲುಗಳನ್ನು ನಡೆಸುತ್ತಿದ್ದೇವೆ. ಮುಂದೆ ಆ ಜೈಲು ಮ್ಯಾನ್ಯುಯಲ್ ಅನ್ನೂ ಬದಲಾವಣೆ ಮಾಡಿ. ಆಮೇಲೆ ಎಲ್ಲಾ ಸರಿ ಹೋಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಿಂಧ್ಯಾರವರು ಮತ್ತು ದೇಶಪಾಂಡೆಯವರು ಮತ್ತು ವಾಟಾಳ್ ನಾಗರಾಜ್‌ರವರು ಮತ್ತೆ ಪ್ರೊ. ನಂಜುಂಡಸ್ವಾಮಿಯವರು ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಎತ್ತಿದ್ದಾರೆ. ಜೈಲಿಗೆ ಸಂಬಂಧಪಟ್ಟಿದ್ದು ಸಾಧಾರಣ ಎಲ್ಲರದ್ದು ಒಂದೇ ಬರುತ್ತದೆ. ನಾನು ಒಪ್ಪುತ್ತೇನೆ ಏಕೆಂದರೆ ನಾನೂ ಕೂಡ ಮೊನ್ನೇ ಬಹಳ ಕೂಲಂಕಷವಾಗಿ ಬರೀ ಹಾರ, ತುರಾಯಿ ಹಾಕಲಿಕ್ಕೆ ಅಲ್ಲ ಅವರ ಜೊತೆಯಲ್ಲೂ ಮಾತನಾಡಿದ್ದೇನೆ. ಖೈದಿಗಳ ಜೊತೆಯಲ್ಲಿ ಕೂಡ ಮಾತನಾಡಿದ್ದೇನೆ. ಆ ಪರಿಸರವನ್ನೆಲ್ಲಾ ನಾನು ನೋಡಿದೆ. ನಾನು ಒಪ್ಪುತ್ತೇನೆ. ಇದು ನಾಗರೀಕ ಸಮಾಜಕ್ಕೆ ಸರಿಯಾದಂತಹ ಜೈಲು ಇಲ್ಲ ಅಲ್ಲಿ. ನನ್ನ ದೃಷ್ಟಿಯಲ್ಲಿ. ಅದು ಬದಲಾವಣೆ ಆಗಲೇಬೇಕು ಮತ್ತು ತಾವು ಹೇಳಿದ ಪ್ರಕಾರ ಬ್ರಿಟೀಷ್ ಕಾಲದ ಮ್ಯಾನುಯಲ್‌ನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಅದು ಬದಲಾವಣೆ ಆಗಬೇಕು. ತಿದ್ದುಪಡಿ ಆಗಲೇಬೇಕು ಈಗಾಗಲೇ ಹೊಸ ಸುಧಾರಿತವಾದಂಥ ಜೈಲ್‌ಗೆ ನಾವು ಡಿಸೆಂಬರ್ 93ರ ಮೊದಲು ಇಲ್ಲಿಂದ ಖೈದಿಗಳನ್ನು ಸ್ಥಳಾಂತರ ಮಾಡಬೇಕೆಂದು ಯೋಜನೆ ಕೂಡ ಹಾಕಿಕೊಂಡಿದ್ದೇವೆ. ಅದಕ್ಕೆ ಪೂರಕವಾದಂತಹ ಸಂಪನ್ಮೂಲ ಮತ್ತು ಹಣವನ್ನು ಕೂಡ ಒದಗಿಸುತ್ತಿದ್ದೇವೆ. ಈ ಜೈಲಿನ ಪರಿಸರ ಏನೂ ಚೆನ್ನಾಗಿಲ್ಲ, ನಾನೂ ನೋಡಿದ್ದೇನೆ ನನಗೆ ಬಹಳ ದುಃಖವಾಗಿದೆ. ಏಕೆಂದರೆ ಅವರೂ ನಾಗರೀಕರಾಗಿದ್ದಾರೆ, ಮನುಷ್ಯರಾಗಿದ್ದಾರೆ, ಮತ್ತೊಂದು ವಿಚಾರ ನಾನು ಕಂಡುಕೊಂಡಿದ್ದೇನೆ. ಬಹಳ ವಯಸ್ಸಾದವರು. 14 ವರ್ಷ ಜೀವಾವಧಿ ಶಿಕ್ಷೆ ಆಗಿ ಅಲ್ಲಿದ್ದಾರೆ. ಅದಕ್ಕೆ ನಾವು ಈಗಾಗಲೇ ಒಂದು ಮಸೂದೆ ಮಾಡಿಕೊಂಡು 10ರಿಂದ 14 ವರ್ಷದ ಒಳಗಡೆ ಇರುವವರನ್ನು ಬಿಡುಗಡೆ ಮಾಡತಕ್ಕಂಥ ಒಂದು ಅಧಿಕಾರ ತೆಗೆದುಕೊಂಡು ಈಗಾಗಲೇ ಅದು ರಾಷ್ಟ್ರಾಧ್ಯಕ್ಷರ ಮಂಜೂರಾತಿಗಾಗಿ ದಸ್ಕತ್‌ಗೆ ಹೋಗಿದೆ. ಅದು ಬಂದ ಕೂಡಲೇ ಬಹಳ ಜನ ಮುದುಕರು ಬಹಳ ಜನರು ಬಹಳ ಕಷ್ಟ ಅನುಭವಿಸಿದವರು ಹೊರಗೆ ಬರಲಿಕ್ಕೆ ಆಗುತ್ತದೆ. ಮತ್ತೊಂದು ನಾನು ಕಂಡುಕೊಂಡಿದ್ದು ಏನೆಂದರೆ ಬಹಳ ಜನ ಅಂಡರ್ ಟ್ರೈಯಲ್ಸ್ ಇದ್ದಾರೆ. ಅವರಿಗೆ ಜಾಮೀನು ಕೊಡಲಿಕ್ಕೆ ಇಲ್ಲ; ಸಣ್ಣ ಸಣ್ಣ ಆಫೆನ್ಸ್‌ಗಳಲ್ಲಿ ಇನ್‌ವಾಲ್ವ್ ಆಗಿರುತ್ತಾರೆ. ಅಂಡರ್ ಟ್ರೈಯಲ್ಸ್ ಬಹಳ ವರ್ಷಗಳಿಂದ ಪೆಂಡಿಂಗ್ ಇದೆ. ಅದು ಬಹಳ ಹಿಂಸೆಯಾಗುತ್ತದೆ. ಅದಕ್ಕೆ ನಾನು ನಮ್ಮ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡಿಕೊಂಡು ಇಂಥ ಅಂಡರ್ ಟ್ರಯಲ್ಸ್ ಬಗ್ಗೆ ಬೇಕಾದರೆ, ಸ್ಪೆಶಲ್ ಬೆಂಚ್ constitute ಮಾಡಿ ಡಿಸ್ಪಿಕ್ಟ್ ಜಡ್ಜಸ್ ಸ್ವಲ್ಪ ಡಿಸ್ಪೋಸ್ ಮಾಡುವುದಕ್ಕೆ ವಿಶೇಷವಾದಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನ್ಯಾಯಾಧೀಶರನ್ನು ನಾನು ಒಮ್ಮೆ

ಕೇಳಿಕೊಂಡಿದ್ದೇನೆ. ಅಂಡರ್ ಟ್ರಯಲ್ಸ್‌ನಲ್ಲಿ ಸಣ್ಣ ಸಣ್ಣ ಹುಡುಗರು ಕೂಡ ಇದ್ದಾರೆ. ಅಂಥವರಲ್ಲಿ ಶ್ರೀನಿವಾಸ್ ಕೂಡ ಒಬ್ಬರು ಇರಬಹುದು. ಆದ್ದರಿಂದ ಇದನ್ನು ನಾವು ಸಮಗ್ರವಾಗಿ ....

ಶ್ರೀ ವಾಟಾಳ್ ನಾಗರಾಜ್ : ರಸ್ತೆಯಲ್ಲಿ ಮೂತ್ರ ವಿಸರ್ಜನೆ ಮಾಡಿ ಕೇಸ್ ಹಾಕಿಸಿಕೊಂಡು ಹೋದವರು ಕೂಡ ಇದ್ದಾರೆ...

ಶ್ರೀ ಎಂ. ವೀರಪ್ಪ ಮೊಯಿಲಿ : ಅನೇಕ ಬಾರಿ ಇಂಥ ಹುಡುಗರ ತಂದೆ-ತಾಯಿ, ಅಣ್ಣ, ತಮ್ಮ, ಹೀಗೆ ಎಲ್ಲರೂ ಕೂಡ ಅವರ ಕೈ ಬಿಟ್ಟೇ ಬಿಟ್ಟಿದ್ದಾರೆ. ಕೆಲವರು ನಾನು ಮಾತನಾಡುವಾಗ ಕೂಡ ಹೇಳಿದ್ದಾರೆ. ನಾವು ಪಿಕ್‌ಪಾಕೇಟ್ ಮಾಡಿದವರು, ಒಂದೇ ಸಾರಿ ಮಾಡಿದ್ದೇವೆ, ಇನ್ನು ಮುಂದೆ ಮಾಡುವುದಿಲ್ಲ ಎಂದು ಮುಂತಾಗಿ ಹೇಳಿದ್ದಾರೆ. ನಾವು ಇನ್ನೂ ಕೂಡ ಜೈಲಿನಲ್ಲಿಯೇ ಉಳಿದುಕೊಳ್ಳಬೇಕಾಗಿದೆ ಎಂದು ವಿಷಾದಪಟ್ಟು ಹೇಳುವ ಅನೇಕ ಮಕ್ಕಳು ಇದ್ದಾರೆ. ಅವರಲ್ಲಿ ಹೆಚ್ಚಿನವರು 16-17 ವರ್ಷದವರು ಕೂಡ ಇದ್ದಾರೆ. ಇದು ಚಿಂತಾಜನಕವಾದ ವಿಚಾರ. ಅದನ್ನು ಸಮಗ್ರವಾಗಿ ನಾವು ಬದಲಾವಣೆ ಮಾಡಬೇಕು, ನಾವು ವಿಚಾರ ಮಾಡಬೇಕು. ಅಂಡರ್‌ಟ್ರಯಲ್ಸ್‌ನಲ್ಲಿ ಬಹಳ ವರ್ಷಗಳಿಂದ ಒಳಗೆ ಇದ್ದವರು ಬಹಳ ವರ್ಷಗಳವರೆಗೆ ಇರಬಾರದು. ಈ ಬಗ್ಗೆ ಒಂದು ನಿರ್ದೇಶನವನ್ನು ನಾನು ಪೋಲೀಸ್ ಇಲಾಖೆಗೆ ಕೊಟ್ಟಿದ್ದೇನೆ. ಸಂಬಂಧಪಟ್ಟ ಜೈಲ್ ಅಧಿಕಾರಿಗಳಿಗೂ ಕೂಡ ಸೂಚನೆ ಕೊಟ್ಟಿದ್ದೇನೆ. ಏಕೆಂದರೆ ನಾವು ಇದನ್ನು ಶಿಫ್ಟ್ ಮಾಡಲಿದ್ದೇವೆ, ಆದರೆ ಶಿಫ್ಟ್ ಮಾಡುವವರೆಗೆ ಏನೊಂದು ಕನಿಷ್ಟವಾದಂಥ ಅವಶ್ಯಕತೆಗಳನ್ನು ಜೈಲಿನೊಳಗೆ ಒದಗಿಸಬೇಕು., ಅವರಿಗೆ ಚಿಕಿತ್ಸೆ ಕೊಡಬೇಕಾದುದು ಮುಂತಾಗಿ ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ಬಹಳಷ್ಟು ಸೌಲಭ್ಯಗಳನ್ನು ಜೈಲಿನಲ್ಲಿರುವವರಿಗೆ ಕೊಡಬೇಡಿ. ಏಕೆಂದರೆ ಅವರು ಮನೆ ಮರೆತು ಅಲ್ಲಿಯೇ ಇದ್ದಾರು . . .

ಶ್ರೀ ಎಂ. ವೀರಪ್ಪ ಮೊಯಿಲಿ : ಏಕೆಂದರೆ ಅವರೂ ಕೂಡ ಮನುಷ್ಯರೇ ಅಲ್ಲವೇ? ಏನೋ ಅವರು ಜೈಲಿಗೆ ಹೋದರು ಎಂದು ಅವರನ್ನು ಪ್ರಾಣಿಗಳು ಎಂದು ಟ್ರೀಟ್ ಮಾಡಬಾರದು.

ಶ್ರೀ ಪಿ. ಜಿ. ಆರ್. ಸಿಂಧ್ಯ : ನಮ್ಮ ಅನುಭವವನ್ನು ಹೇಳುತ್ತೇವೆ, ನಾವು ಕೂಡ ಎರಡೆರಡು ವರ್ಷ ಜೈಲ್‌ನಲ್ಲಿದ್ದವರು. ಹಸಿಪರಂಗಿ ಕಾಯಿ ಅದನ್ನು ತರಕಾರಿ ಎಂದು ಕೊಡುತ್ತಾರೆ. ಮೂರು ದಿನಗಳ ಕಾಲ ಕೊಳೆತು ಹೋದಂಥ ಮಾಂಸವನ್ನು ತೆಗೆದುಕೊಂಡು ಬಂದು ಅಲ್ಲಿಗೆ ಮಾರುತ್ತಾರೆ. ನಾನು ಜೈಲ್‌ನ ಪರಿಸ್ಥಿತಿಯ ಬಗ್ಗೆ ಏಕೆ ಮಾತನಾಡಲಿಲ್ಲ ಎಂಬುದನ್ನೂ ಹೇಳುತ್ತೇನೆ. Because the importance of Srinivas death will go ಎಂದು ಹೇಳಿ ನಾನು ಮಾತನಾಡಲಿಕ್ಕೆ ಹೋಗಲಿಲ್ಲ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಸಿಂಧ್ಯರವರು ಕೊಳೆತ ಮಾಂಸ ಮತ್ತು ಪರಂಗಿಕಾಯಿಯ ಸಾಂಬಾರ್ ವಿಚಾರ ಮಾತನಾಡಿದರು. ಅದಕ್ಕಿಂತ 14 ವರ್ಷ ಅವರು ಜೈಲ್‌ನಲ್ಲಿದ್ದ ಮೇಲೆಯೂ 16-17 ವರ್ಷಗಳು ಜೈಲಿನಲ್ಲಿದ್ದ ಕೈದಿಗಳೂ ಇದ್ದಾರೆ. ಇದು ನನಗೆ ಬಂದಂಥ ಮಾಹಿತಿ. ಅದನ್ನು ಮೊದಲು ತಾವುಗಳು ತನಿಖೆ ಮಾಡಿಸಬೇಕು. ಹಾಗೆಯೇ ನಾವು ಇಲ್ಲಿ ತಿದ್ದುಪಡಿಯನ್ನು ಮಾಡಿದೆವು,

ಜೀವಾವಧಿ ಶಿಕ್ಷೆಯನ್ನು 14 ವರ್ಷದಿಂದ 10 ವರ್ಷಕ್ಕೆ ಇಳಿಸಿದರು. ನಾವು ಹೀಗೆ ಇಳಿಸಿ ಎಷ್ಟು ದಿವಸಗಳು ಆದುವು? ನಾವು ಆ ತಿದ್ದುಪಡಿಯನ್ನು ತಂದು ಎಷ್ಟು ದಿವಸಗಳು ಆದುವು? ಅದು ರಾಷ್ಟ್ರಾಧ್ಯಕ್ಷರ ಹತ್ತಿರ ಸಹಿಗಾಗಿ ಇದೆ ಎಂಬುದು ನನಗೆ ಗೊತ್ತಿದೆ. ಅಂತೆಯೇ ರೆಂಟ್ ಕಂಟ್ರೋಲ್ ಕಾಯಿದೆಯ ಬಗ್ಗೆ ಮಸೂದೆಯನ್ನು ಮಂಡಿಸಿ ರಾಷ್ಟ್ರಪತಿಯವರ ಸಹಿ ಕೂಡ ಆಗಿ ಬಂದು ಬಿಟ್ಟಿದೆ. ಹೀಗೆ ರೆಂಟ್‌ಕಂಟ್ರೋಲ್ ಕಾಯಿದೆಗೆ ಅನುಮತಿ ತರುವ ಅವಸರ ನಮಗೆ ಇದೆ. ಜೈಲ್‌ನಲ್ಲಿ 14 ವರ್ಷವಾದರೂ ಅಲ್ಲಿಯೇ ಕೊಳೆಯುತ್ತಿರುವ ಕೈದಿಗಳ ಬಗ್ಗೆ ನಮಗೆ ಯಾವ ಅನುಕಂಪವೂ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ದಯಮಾಡಿ ಮುಂದಿನ ಬಾರಿ ದೆಹಲಿಗೆ ಹೋದಾಗ ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಆ ಮಸೂದೆಗೆ ಪಡೆದುಕೊಂಡು ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಯಾವುದೋ ಒಂದು ಸಂದರ್ಭದಲ್ಲಿ ಬಿಡುಗಡೆ ಮಾಡಿದ್ದಾರೆ....

ಶ್ರೀ ಎಂ. ವೀರಪ್ಪ ಮೊಯಿಲಿ : ಇರಬಹುದು, ಆದರೆ ಕಾನೂನು ಪ್ರಕಾರ ಬಿಡುಗಡೆ ಮಾಡಲು ಬರುವುದಿಲ್ಲ. ನಾವು ಈಗಾಗಲೇ ಮಸೂದೆಯನ್ನು ಮಾಡಿದ್ದೇವೆ, ಅದಕ್ಕೆ ಕೇಂದ್ರ ಸರಕಾರದ ಜೊತೆಗೆ ವ್ಯವಹರಿಸಿದ್ದೇವೆ, ಯಾವುದೇ ಸಂದರ್ಭದಲ್ಲಿ ಆ ತಿದ್ದುಪಡಿ ಅಂಗೀಕಾರವಾಗಿ ಬರಬಹುದು. ಇನ್ನು ತಾವೇನು ಶ್ರೀನಿವಾಸ್ ಬಗ್ಗೆ ಹೇಳಿದ್ದೀರಿ, ಅದರ ಬಗ್ಗೆ ತನಿಖೆ ನಡೆಸಿ, ನಾಳೆ ಅದರ ಬಗ್ಗೆ ಒಂದು ವರದಿಯನ್ನು ಕೊಡುತ್ತೇನೆ. ಪರಿಹಾರವನ್ನು ಕೂಡ ಕೊಡೋಣ.

ಶ್ರೀ ಆರ್. ವಿ. ದೇಶಪಾಂಡೆ : ಎಲ್ಲೆಲ್ಲಿ ಲಾಕಪ್ ಡೆತ್ ಆಗಿದೆ, ಅವರಿಗೆ ಕಾಂಪನ್‌ಸೇಷನ್ ಕೊಡಬೇಕೆಂದು, ಸುಪ್ರೀಂಕೋರ್ಟ್ ಡಿಸಿಷನ್ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಪೋಲೀಸ್ ಸ್ಟೇಷನ್‌ನಲ್ಲಿ ಆದ ಸಾವಿಗೆ ಅಲ್ಲ, ಜ್ಯೂಡೀಷಿಯಲ್ ಕಸ್ಟಡಿಯಲ್ಲಿ ಆದರೆ ಮಾತ್ರ. ನ್ಯಾಯಾಂಗ ತನಿಖೆಯನ್ನು ಇದಕ್ಕೆ ನಾವು ಮಾಡುತ್ತೇವೆ ಎಂದು ಹೇಳಲಿಲ್ಲ. ಲಾಕಪ್‌ಡೆತ್ ಇನ್ ಪೋಲೀಸ್ ಸ್ಟೇಷನ್ ಬಗ್ಗೆ ಹೌದು ಎಂದು ಹೇಳುತ್ತೇನೆ. ಈ ಬಗ್ಗೆ ನಾನು ತನಿಖೆ ಮಾಡಿ ನಾಳೆ ವರದಿಯನ್ನು ಕೊಡುತ್ತೇನೆ. ಪರಿಹಾರವನ್ನು ಕೂಡ ಕೊಡಿಸುತ್ತೇನೆ. ಇನ್ನು ಮಾನ್ಯ ಸದಸ್ಯರು ಮಹದೇವ ಶೆಟ್ಟಿ ವಿಚಾರದಲ್ಲಿ ಹೇಳಿದ್ದಾರೆ. ಅದಕ್ಕೆ ನಾನು ಈಗಾಗಲೇ ಹೇಳಿದ ನೆನಪು, ಈಗಾಗಲೇ ನಾವು 25 ಸಾವಿರ ಕೊಟ್ಟಿದ್ದೇವೆ, ಅದನ್ನು ಒಂದು ಲಕ್ಷಕ್ಕೆ ಏರಿಸಬೇಕೆಂದು ಇದೆ. ಏಕೆಂದರೆ, ಕೋಮುಗಳ ಜೊತೆಯಲ್ಲಿ ಗುಂಪುಘರ್ಷಣೆ ಆದ ಕಾರಣ ಇದಕ್ಕೆ ಒಂದು ಲಕ್ಷವೇ ಕೊಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಪ್ಪಿತಸ್ಥರು ಅಲ್ಲಿ ದಸ್ತಗಿರಿಯಾಗಿಲ್ಲ, ಅಲ್ಲಿ ಮನೆಗಳಿಗೆ ಬೆಂಕಿ ಹಾಕಿದ್ದಾರೆ, ಹುಲ್ಲಿನ ಮೆದೆಗಳು ಸುಟ್ಟು ಹೋಗಿವೆ, ಯಾವ ಮಂತ್ರಿಗಳೂ ಕೂಡ ಅಲ್ಲಿಗೆ ಹೋಗಲಿಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಪರಿಹಾರ ಕೊಡುತ್ತೇವೆ ಎಂದು ಹೇಳಿದ್ದಾರೆ, ಪುನಃ ಅದನ್ನೇ ಹೇಳುತ್ತಾ ಇದ್ದೀರಿ.

ವಿಷಯ : ಬದನವಾಳು ಗ್ರಾಮದಲ್ಲಿ ನಡೆದ ಹತ್ಯೆಯ ಖಂಡನೆ.

* ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಮೊನ್ನೆಯ ಸಾರಿ ನಾವು ಬದನವಾಳು ಹರಿಜನರ ಬಗ್ಗೆ ಮಾತನಾಡಿದ್ದೇವೆ. ನಮ್ಮ ಮಲ್ಲಾಜಮ್ಮನವರು, ಮೋಟಮ್ಮನವರು ಮತ್ತು ಈ ಸದನದ ಎಲ್ಲಾ ಜಾತಿಯ ಸದಸ್ಯರು ಕೂಡ ಅದರ ಬಗ್ಗೆ ಕಾಳಜಿಯನ್ನು ವ್ಯಕ್ತಮಾಡಿದ್ದಾರೆ. ಯಾರು ಕೊಲೆಗಡುಕರಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಅದನ್ನು ಸಿಬಿಐ ತನಿಖೆಗೆ ಒಪ್ಪಿಸುತ್ತೇವೆ ಎಂದು ಕೂಡ ಹೇಳಿದ್ದಾರೆ. ಆದರೆ ಯಾರು ಕೂಡ ಜಾತಿಯ ಬಗ್ಗೆ ಮಾತನಾಡಿಲ್ಲ. ಮಾನ್ಯ ದೇಶಪಾಂಡೆಯವರು ಕೂಡ ಮಾತನಾಡುವಾಗ ನಾನು ಇಂಥ ಜಾತಿ ಎಂದು ಹೇಳುವುದಿಲ್ಲ, ಯಾರು ಕೊಲೆಗಡುಕರು ಇರುತ್ತಾರೋ ಅವರನ್ನು ಕೊಲೆಗಡುಕರ ಜಾತಿ ಎಂದು ಹೇಳಬೇಕಾಗುತ್ತದೆ ಎಂದು ಹೇಳಿದ್ದಾರೆ. ಇಷ್ಟು ಮುಕ್ತವಾಗಿ ಇಲ್ಲಿ ಚರ್ಚೆ ಮಾಡುವಂಥ ಅವಕಾಶವಿದ್ದರೂ ಕೂಡ, ಒಂದು ಸಂಘಟನೆ ಇದನ್ನು ವಿರುದ್ಧ ಮಾಡಿ ನಮ್ಮ ಮಾನ್ಯ ನಾಯಕರಾದಂಥ ವೀರಪ್ಪ ಮೊಯಿಲಿಯವರಿಗೆ ಧಿಕ್ಕಾರ ಕೂಗಿದ್ದಾರೆ, ಮೋಟಮ್ಮ ಮಲ್ಲಾಜಮ್ಮನವರಿಗೂ ಕೂಡ ದಿಕ್ಕಾರ ಕೂಗಿದ್ದಾರೆ. ಇಷ್ಟು ಜನರಿಗೆ ಧಿಕ್ಕಾರ ಕೂಗಿ ಈ ಸದನದ ಸದಸ್ಯರಾದಂಥ ಮಾನ್ಯ ಮಹದೇವ್ರುರವರಿಗೆ ಜಯಕಾರ ಕೂಗಿದ್ದಾರೆ. ಹೀಗಾದರೆ ನಾವು ಮುಕ್ತ ವಾತಾವರಣದಲ್ಲಿ ಚರ್ಚೆ ಮಾಡಲು ಸಾಧ್ಯವೇ? ಅಥವಾ ನಮಗೆ ಇಲ್ಲಿ ರಕ್ಷಣೆ ಇದೆಯೇ? ಈ ಬಗ್ಗೆ ಮುಖ್ಯಮಂತ್ರಿಗಳು ಏನಾದರೂ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಹರಿಜನರಿಗೆ ಭದ್ರತೆಯನ್ನು ಕೊಡಲು ಆಗುತ್ತದೆಯೇ ಎಂದು ತಿಳಿಸಬೇಕು? ಯಾವುದೋ ಪಾರ್ಟಿಗಳು ಮೆರವಣಿಗೆ ಮಾಡಿಕೊಂಡು ಅವರು ಇವರಿಗೆ, ಇವರು ಅವರಿಗೆ ಧಿಕ್ಕಾರ ಕೂಗಿದ್ದರೆ ನಾನು ಕೇಳುತ್ತಿರಲಿಲ್ಲ, ಈ ಬಗ್ಗೆ ಚರ್ಚೆಯು ಸದನದಲ್ಲಿ ನಡೆದು, ಸದನ ಒಂದು ತೀರ್ಪನ್ನು ಕೊಟ್ಟ ಮೇಲೆ ಇದು ನಡೆದಿದೆ. ಮುಖ್ಯ ಮಂತ್ರಿಯವರು ಯಾರಿಗೂ ಕೂಡ ವಿರುದ್ಧವಾಗಿ ಹೇಳಲಿಲ್ಲ, ಯಾರು ಕೊಲೆಗಡುಕರಿದ್ದಾರೋ ಅದನ್ನು ಗಣನೆಗೆ ತೆಗೆದುಕೊಂಡಿದ್ದೇನೆ, ಅವರ ಮೇಲೆ ತನಿಖೆ ಮಾಡಲು ಸಿಬಿಐ ಎನ್‌ಕ್ವಯರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ವ್ಯವಸ್ಥಿತವಾಗಿ ಮೆರವಣಿಗೆ ಮಾಡಿ ಧಿಕ್ಕಾರ ಹಾಕಲು ಅನುಕೂಲ ಮಾಡಿಕೊಟ್ಟಂಥ ಅಧಿಕಾರಿಗಳು ಯಾರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ಆಮೊತ್ತು ಸ್ಪಷ್ಟೀಕರಣ ಕೇಳಲಿಲ್ಲ. ವಿರೋಧ ಪಕ್ಷದ ನಾಯಕರು ಕೇಳಿದರು, ಮುಖ್ಯಮಂತ್ರಿಯವರು ಪೋಲೀಸ್ ಇಲಾಖೆಯನ್ನು ಉಳಿಸುವ ರೀತಿಯಲ್ಲಿ ಉತ್ತರ ಹೇಳಿದರೂ ಕೂಡ ನಾವು ಸ್ಪಷ್ಟೀಕರಣ ಕೇಳಲಿಲ್ಲ. ಅಲ್ಲಿನ ಸರ್ಕಲ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಿದ ವಿಚಾರ ನಿಜವಾಗಿಯೂ ಯೋಗ್ಯವಾದುದು. ಎರಡು ದಿವಸಗಳ ನಂತರದಲ್ಲಿ ಈ ಹರಿಜನ ಯುವಕರು ಸಂಘಟನೆಯಾಗಿ ಸವರ್ಣೀಯರ ಮೇಲೆ ದಂಗೆ ಏಳುತ್ತಾರೆಂದು ಹೇಳಿ, ಮನೆಮನೆಗಳಿಗೆ ನುಗ್ಗಿ ಹೆಂಗಸರು ಮಕ್ಕಳು ಎನ್ನದೇ ಲಾಟಿಯಲ್ಲಿ ಹೊಡೆದಿದ್ದಾರೆ. ಆ ದೂರನ್ನು ಮಾನ್ಯ ಮುಖ್ಯಮಂತ್ರಿಯವರಿಗೂ ಕೂಡ ಕೊಟ್ಟಿದ್ದಾರೆ, ಅವರು ಎಲ್ಲರಿಗೂ ವರದಿ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ಪೋಲೀಸ್ ವ್ಯವಸ್ಥೆ ಆ ರೀತಿಯಲ್ಲಿ ಇದ್ದ ಕಾರಣ ಹಾಗೆ ಮಾಡಿದ್ದಾರೆ. ಈ ವಿಚಾರದಲ್ಲಿ ಜಾತಿಯ ವಿಷಬೀಜವನ್ನು ಬಿತ್ತುವುದು ಬೇಡ, ಎಂದು ಅಸೆಂಬ್ಲಿಯಲ್ಲಿ ಯಾರೂ ಜಾತಿಯ ಬಗ್ಗೆ ಮಾತನಾಡಲಿಲ್ಲ. ಮಾನ್ಯ ನಂಜುಂಡಸ್ವಾಮಿಯವರು ಕೂಡ ಇದು ವರ್ಗಾಘರ್ಷಣೆಯಲ್ಲದೇ ಬೇರೇನೂ ಅಲ್ಲ ಎಂದು ಹೇಳಿದ್ದಾರೆ. ಇದನ್ನು ಬಹಳ ಬಿಗಿಯಾಗಿ ಕಂಟ್ರೋಲ್ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಎಲ್ಲೆಲ್ಲಿ ಈ ತರಹದ ಆಟ್ರಾಸಿಟಿಯಾಗುತ್ತದೆಯೋ ಅದರ ಬಗ್ಗೆ ಇಲ್ಲಿ ಮುಕ್ತವಾಗಿ ಮಾತನಾಡುವ ವಾತಾವರಣ ಇಲ್ಲ, ಅದರ ಬಗ್ಗೆ ಹೊರಗಡೆ ಹೀಗೆ ಮೆರವಣಿಗೆ ಮಾಡಿ ಧಿಕ್ಕಾರ ಹಾಕುವುದಕ್ಕೆ ಅಧಿಕಾರಿಗಳು ಅವಕಾಶ ಮಾಡಿಕೊಡುತ್ತಾರೆ